**ಅಸಲು ದಾವಾ ನಂ:117/2021**
**ಪಿ.ಡಬ್ಲ್ಯೂ: 01**

**ದಿನಾಂಕ: 28-11-2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಶ್ರೀ ಆರ್ ಎಸ್ ಎಂ ಪ್ರತಿವಾದಿ ಪರ ವಕೀಲರಿಂದ**

ನಾನು 7 ನೇ ತರಗತಿಯವರೆಗೆ ವ್ಯಾಸಂಗ ಮಾಡಿರುತ್ತೇನೆ. ನಾನು ಟೆಲರಿಂಗ್ ವೃತ್ತಿಯನ್ನು ಮಾಡುತ್ತೇನೆ. ಪ್ರಸ್ತುತವಾಗಿ ದಾವಣಗೆರೆಯಲ್ಲಿ ವಾಸವಿದ್ದೇನೆ. ಪ್ರಸ್ತುತ ದಾವೆಯಲ್ಲಿ ನಾನು 3 ನೇ ವಾದಿ ಇರುತ್ತೇನೆ. 1 ನೇ ವಾದಿಯು ನನಗೆ ಹಿರಿಯಣ್ಣನಾಗಿದ್ದು ಅಂಬಲಗೆರೆ ಹಿರಿಯೂರು ತಾಲ್ಲೂಕಿನಲ್ಲಿ ವ್ಯವಸಾಯವನ್ನು ಮಾಡುತ್ತಾರೆ. 2 ನೇ ವಾದಿಯು ಕೂಲಿ ಕೆಲಸವನ್ನು ಮಾಡುತ್ತಿದ್ದು ಸದರಿಯವರು ದಾವಣಗೆರೆಯಲ್ಲಿ ವಾಸವಿದ್ದಾರೆ. 4 ನೇ ವಾದಿಯು ಹಿರಿಯೂರಿನಲ್ಲಿ ಕೂಲಿ ಕೆಲಸವನ್ನು ಮಾಡಿಕೊಂಡು ವಾಸವಿದ್ದಾರೆ. 5 ನೇ ವಾದಿಯು ಹೈದರಾಬಾದಿನ ಹೋಟೆಲ್ ಒಂದರಲ್ಲಿ ಕೆಲಸ ಮಾಡುತ್ತಿದ್ದಾರೆ.

2. 4 ನೇ ಪ್ರತಿವಾದಿ ಫಾತಿಮಾರವರ ಗಂಡನ ಹೆಸರು ಗರೀಬ್ ಸಾಬ್. ಅದೇ ರೀತಿಯಾಗಿ 5 ನೇ ಪ್ರತಿವಾದಿ ಜೈನಾಬಿ ಗಂಡನ ಹೆಸರು ಮಹಮ್ಮದ್ ಸಾಬ್. ನಾನು ವಾದ ಪತ್ರದಲ್ಲಿ 4 ನೇ ಪ್ರತಿವಾದಿ ಫಾತಿಮಾರವರ ಗಂಡನ ಹೆಸರು ಖಾಸಿಂ ಸಾಬ್ ಎಂದು ತೋರಿಸಿರುತ್ತೇನೆ ಎಂದರೆ ಸರಿ.

**(ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು, ಸದರಿ ಕೋರಿಕೆಯನ್ನು ಅನುಮತಿಸಲಾಯಿತು ಮತ್ತು ಪಾಟೀ ಸವಾಲನ್ನು ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.